ಹೇಳಿದರೆ ಒಳ್ಳೆಯದು. ಈಗಾಗಲೇ ಒಂದು ವರ್ಷದಿಂದ ಇದು ಆರ್ಥಿಕ ಇಲಾಖೆಯಲ್ಲಿದೆ. ಸುಮ್ಮನೆ ಬಜೆಟ್‌ನಲ್ಲಿ ಹೇಳುವುದು ಪುನಃ ಆರ್ಥಿಕ ಇಲಾಖೆಗೆ ಕಳುಹಿಸುವುದು. ಅವರು ಇಟ್ಟುಕೊಂಡು ಕುಳಿತುಕೊಳ್ಳುವುದು. ಇದಕ್ಕೇನು ಅರ್ಥ ಇದೆ?

**ಡಾ: ವಿ.ಎಸ್. ಆಚಾರ್ಯ (ಪಶುಸಂಗೋಪನಾ ಸಚಿವರ ಪರವಾಗಿ)** : ಮಾನ್ಯ ಸದಸ್ಯರು ಹೇಳಿದಂತೆ ಕುರಿಯ ಬೆಲೆ ಸ್ವಲ್ಪ ಹೆಚ್ಚಿಗೆ ಇರಬಹುದು. ಆದರೆ 1500 ಎಂದು ಒಂದು ಸರಾಸರಿ ಲೆಕ್ಕವನ್ನು ಇಟ್ಟುಕೊಂಡು ಶೇಕಡ 4 ರಂತೆ 60 ರೂಪಾಯಿ ಪ್ರೀಮಿಯಂ ಇಟ್ಟು 50 ರೂಪಾಯಿ ಸರ್ಕಾರ ಕೊಡುತ್ತದೆ. 10 ರೂಪಾಯಿಯನ್ನು ಫಲಾನುಭವಿ ಕೊಡಬೇಕು. ಆರ್ಥಿಕ ಇಲಾಖೆಯ ಒಪ್ಪಿಗೆ ಪಡೆದು ಈ ವಿಮಾ ಯೋಜನೆಯನ್ನು ಜಾರಿಗೆ ತರುತ್ತೇವೆ. ಬಹುಶಃ ಎರಡು ಮೂರು ತಿಂಗಳಿನೊಳಗೆ ಇದು ಆಗಬಹುದು ಎಂದು ಕಾಣಿಸುತ್ತದೆ.

## ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಪಂಗಡ ಹಾಗೂ ಅಲ್ಪಸಂಖ್ಯಾತರ ವಿದ್ಯಾರ್ಥಿನಿಲಯಗಳ ಬಗ್ಗೆ

168 (538) ಶ್ರೀ ಕುಮಾರ್ ಬಂಗಾರಪ್ಪ ಎಸ್. (ಸೊರಬ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಾದ್ಯಂತ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ವಿದ್ಯಾರ್ಥಿ ನಿಲಯಗಳನ್ನು ಮಂಜೂರು ಮಾಡಲು ಯಾವ ಮಾನದಂಡವನ್ನು ಪರಿಗಣಿಸಲಾಗಿದೆ.

ಆ) ಅದನ್ನು ಯಥಾ ಸ್ಥಿತಿಯಲ್ಲಿ ಅನುಷ್ಠಾನಗೊಳಿಸಲಾಗಿದೆಯೇ; ಹಾಗಿದ್ದಲ್ಲಿ ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು;

ಇ) ಆ ರೀತಿ ಮಾನದಂಡದಂತೆ ವಿತರಣೆಯಾಗದಿದ್ದಲ್ಲಿ ಆ ಕ್ಷೇತ್ರಗಳಿಗೆ ವಿದ್ಯಾರ್ಥಿನಿಲಯಗಳ ಮಂಜೂರಾತಿಗೆ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತರಿಗೆ ಸಂಬಂಧಪಟ್ಟಂತೆ ವಿದ್ಯಾರ್ಥಿನಿಯರ ಅವಶ್ಯಕತೆಗೆ ಹಾಗೂ ಬೇಡಿಕೆಗಳಿಗೆ ಅನುಗುಣವಾಗಿ ಲಭ್ಯವಿರುವ ಆಯವ್ಯಯ ಅನುದಾನವನ್ನು ಆಧರಿಸಿ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲಾಗುತ್ತದೆ. ಆದರೆ 2006–07ನೇ ಸಾಲಿನಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿರುವ ವಿದ್ಯಾರ್ಥಿ ನಿಲಯಗಳನ್ನು ಡಾ.ಡಿ.ಎಂ. ನಂಜುಂಡಪ್ಪನವರ ವರದಿಯಲ್ಲಿ ಗುರುತಿಸಿರುವ ಅತ್ಯಂತ, ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ, ಗಡಿ ಪ್ರದೇಶ ಅಭಿವೃದ್ಧಿಗಾಗಿ ಗುರುತಿಸಿರುವ ತಾಲ್ಲೂಕುಗಳಲ್ಲಿ ಸಾಕ್ಷರತೆ ಸುಧಾರಣೆ ಮತ್ತು ಡ್ರಾಪ್ ಔಟ್ ಪ್ರಮಾಣವನ್ನು ಕಡಿಮೆಗೊಳಿಸಲು ವಿದ್ಯಾರ್ಥಿನಿಲಯಗಳ ಪ್ರಾರಂಭಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿ ಮಂಜೂರು ಮಾಡುವ ಮಾನದಂಡವನ್ನು ಯೋಜಿಸಲಾಗಿದೆ.

ಆ) 2006–07ನೇ ಸಾಲಿನಲ್ಲಿ ಹೊಸ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿ ಇರುತ್ತದೆ. ಆದುದರಿಂದ ಈ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಿದ ನಂತರ ಕ್ಷೇತ್ರವಾರು ಮಾಹಿತಿ ಲಭ್ಯವಾಗುತ್ತದೆ.

ಇ) ಪ್ರಸ್ತುತ ಹಂತದಲ್ಲಿ ಇದು ಉದ್ಭವಿಸುವುದಿಲ್ಲ.

**ಶ್ರೀ ಎಸ್. ಕುಮಾರ್ ಬಂಗಾರಪ್ಪ** : ಮಾನ್ಯ ಅಧ್ಯಕ್ಷರೆ, ಎಸ್.ಸಿ. ಎಸ್.ಟಿ: ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ವಿದ್ಯಾರ್ಥಿನಿಲಯಗಳನ್ನು ಯಾವ ಮಾನದಂಡದ ಮೇಲೆ ಮಾಡುತ್ತಿದ್ದೀರಿ ಎಂದು ಮೂಲಭೂತವಾದ ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಅವರು ಡಾ: ನಂಜುಂಡಪ್ಪನವರ ವರದಿಯ ಆಧಾರದ ಮೇಲೆ ಮಾಡುತ್ತೇನೆಂದು ಹೇಳಿದ್ದಾರೆ. ಎಲ್ಲೆ ನೋಡಿದರು ಕೂಡ ನಾವು ಜಾಗ ಕೊಟ್ಟು ನಂಜುಡಪ್ಪನವರ ವರದಿಯ ಪ್ರಕಾರ ಬಂದರು ಮೊರಾರ್ಜಿ ಶಾಲೆ ಇರಬಹುದು ಅಥವಾ ಯಾವುದೇ ಹಾಸ್ಟೆಲ್‌ಗಳು ಇರಬಹುದು, ಆ ಪ್ರಕಾರವೂ ಬರುವುದಿಲ್ಲ ಮತ್ತು ಹಾಸ್ಟೆಲ್‌ಗಳಿಗೆ ಅರ್ಜಿಗಳೇನು ಪದೆ ಪದೆ ಬರುತ್ತಿದೆ ಅದನ್ನೂ ಸಹ ನಮಗೆ ತುಂಬಲು ಆಗುತ್ತಿಲ್ಲ. ಒಂದು ಸೀಟಿಗೆ ನೂರು ಅರ್ಜಿಗಳು ಬರುತ್ತಿವೆ. ಹಾಸ್ಟೆಲ್‌ಗಳನ್ನು ನಂಜುಂಡಪ್ಪ ವರದಿಯ ಪ್ರಕಾರ ಕೊಡುತ್ತೇವೆಂದರೆ ಅದನ್ನೇ ಮಾಡಿ. ಸಬ್‌ಸಿಕ್ವೆಂಟ್ ಆಗಿ ಅವರು ಏನು ಹೇಳುತ್ತಾರೆಂದರೆ, ಯಾವ ಮಾನದಂಡವನ್ನು ಇದರಲ್ಲಿ ಮಾಡುತ್ತೀರೆಂದರೆ ಇದು ಉದ್ಭವಿಸುವುದಿಲ್ಲವೆಂದು ಹೇಳುತ್ತಾರೆ. ನಂಜುಂಡಪ್ಪನವರ ವರದಿಯ ಪ್ರಕಾರ ಕೊಡುತ್ತೇವೆಂದರೆ ಅತ್ಯಂತ ಹಿಂದುಳಿದ ತಾಲ್ಲೂಕುಗಳು ಎಂಬ ಆ ಆಧಾರದ ಮೇಲಾದರೂ ಕೊಡಿ. ಇಲ್ಲದಿದ್ದರೆ ಮಾನದಂಡ ಏನು ಜನಸಂಖ್ಯೆಯ ಆಧಾರದ ಮೇಲೆ ಮಾನದಂಡ ಮಾಡುತ್ತೀರೊ ಅಥವಾ ವಿದ್ಯಾರ್ಥಿಗಳ ಸಂಖ್ಯೆಯನ್ನು ಮಾನದಂಡ ಮಾಡುತ್ತೀರೊ? ಇರತಕ್ಕಂಥ ಹಾಸ್ಟೆಲ್‌ಗಳಿಗೆ ಎಕ್ಸಟೆನ್‌ಷನ್ ಜಾಸ್ತಿ ಮಾಡುತ್ತೀರೊ? ಏನಾದರೂ ಒಂದು ತೀರ್ಮಾನವನ್ನು ಮಾನ್ಯ ಸಚಿವರು ಮಾಡಬೇಕು. ಇಲ್ಲದಿದ್ದರೆ ಪ್ರತಿ ಸಲ ಇದೇ ರೀತಿಯ ಪ್ರಸ್ತಾವನೆ ಕಳುಹಿಸುತ್ತಿರುವುದು ಮತ್ತು ಹಿಂದೆ ಮುಂದೆ ತೊಂದರೆಗಳು ಆಗುತ್ತಿರುತ್ತವೆ. ಇದೇ ರೀತಿ ಬೇರೆ ಕಾರ್ಯಕ್ರಮಗಳನ್ನು ನಂಜುಂಡಪ್ಪ ವರದಿಯ ಆಧಾರದ ಮೇಲೆ ನಾವು ಯಾವ್ಯಾವಾಗ ಕೇಳುತ್ತೇವೆ ಆ ಪ್ರಕಾರವೂ ಕೂಡ ನಾವು ಕಾರ್ಯಕ್ರಮ ತಲುಪಿಸಲು ಇದ್ದೇವೆ. ದಯಮಾಡಿ ಈ ಕಾರ್ಯಕ್ರಮವನ್ನು ಯಾವ ಪ್ರಸ್ತಾವನೆಯನ್ನು ನಾವು ತಮ್ಮ ಮುಂದೆ ಕಳುಹಿಸಿಕೊಟ್ಟಿದ್ದೇವೆ, ನಂಜುಂಡಪ್ಪನವರ ವರದಿ ಮೇಲೆ ಎಂದು ತಾವೇನು ಅನುಮೋದನೆ ಮಾಡಿದ್ದೀರಿ ಆ ಪ್ರಕಾರವಾಗಿ ಹಾಸ್ಟೆಲ್‌ಗಳನ್ನು ಏನು ಸರ್ಕಾರ ಆದ್ಯತೆ ಮೇಲೆ ಕೊಡುತ್ತೇವೆ ಎಂಬ ಮಾತನ್ನು ಹೇಳುತ್ತಿದ್ದೀರಿ ಅದನ್ನು ತತ್‌ಕ್ಷಣ ಮಾಡಿಕೊಡಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಬಾಲಚಂದ್ರ ಜಾರಕಿಹೊಳಿ** : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಗರುವನಕ್ಕೆ ತರಲು ಬಯಸುತ್ತೇನೆಂದರೆ, ಸರ್ಕಾರವು ನಂಜುಂಡಪ್ಪನವರ ವರದಿಯನ್ನು ಆಧಾರವಾಗಿಟ್ಟುಕೊಂಡು ಯಾವುದೇ ಹಾಸ್ಟೆಲ್ ಇರಬಹುದು, ಮೊರಾರ್ಜಿದೇಸಾಯಿ ಶಾಲೆ ಇರಬಹುದು ಮಂಜೂರು ಮಾಡುತ್ತಿದ್ದರು, ಅದರಲ್ಲಿ ಇನ್ನೊಂದು ವಿಷಯವನ್ನು ಸರ್ಕಾರ ಗಮನದಲ್ಲಿಟ್ಟುಕೊಂಡಿತ್ತು. ಈಗಾಗಲೇ

ಅನೇಕ ಕ್ಷೇತ್ರದಲ್ಲಿ ಒಂದು ಕಡೆ ಮತ್ತು ಹತ್ತು ಇಪ್ಪತ್ತು ಹಾಸ್ಟೆಲ್‌ಗಳು ಇದೆ. ಕೆಲವು ಕಡೆ ಒಂದು ಇಲ್ಲವೆ ಎರಡು ಹಾಸ್ಟೆಲ್‌ಗಳು ಸಹ ಇಲ್ಲ. ಆದ್ದರಿಂದ ನಂಜುಂಡಪ್ಪನವರ ವರದಿಯನ್ನು ಆಧಾರವಾಗಿಟ್ಟುಕೊಂಡು ಎಲ್ಲಿ ಹಾಸ್ಟೆಲ್‌ಗಳ ಸಂಖ್ಯೆ ಕಡಿಮೆ ಇದೆ ಅದನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತೇವೆ. ತಾವು ಹೇಳಿದಂತೆ ಹಾಸ್ಟೆಲ್‌ಗಳ ಬೇಡಿಕೆ ಸಿಕ್ಕಾಪಟ್ಟೆ ಬಂದಿದೆ. ಈ 2006–07ನೇ ಸಾಲಿಗೆ 110 ಹೊಸ ಹಾಸ್ಟೆಲ್‌ಗಳು ಸ್ಯಾಂಕ್ಷನ್ ಆಗಿದೆ. ಅದರಲ್ಲಿ 50 ಎಸ್.ಸಿ. ಗೆ 50 ಬಿ.ಸಿ.ಎಂ. ಗೆ 10 ಎಸ್.ಟಿ. ಗೆ. ಹೊಸ ಹಾಸ್ಟೆಲ್ ಸ್ಯಾಂಕ್ಷನ್‌ಗೆ ಒಂದು ಸಾವಿರಕ್ಕೂ ಮೇಲ್ಪಟ್ಟು ಅರ್ಜಿಗಳು ಬಂದಿದೆ. ಅದೆಲ್ಲವನ್ನೂ ಗಮನದಲ್ಲಿಟ್ಟುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಸಂಖ್ಯಾಬಲವನ್ನು ಹೆಚ್ಚು ಮಾಡುತ್ತೀರಾ ಎಂದು ಕೇಳಿದರು. ಈಗಾಗಲೇ ಬಹಳ ಕಡೆಗಳಿಂದ ಪಂಚಾಯಿತಿಯ ಮೂಲಕ ಸೀಟನ್ನು ಹೆಚ್ಚು ಮಾಡಬೇಕೆಂದು ಪ್ರಸ್ತಾವನೆ ಬಂದಿದೆ. ಎಲ್ಲಿ ಆ ರೀತಿಯ ಸಮಸ್ಯೆ ಇದೆ, ಅಲ್ಲಿ ಖಂಡಿತವಾಗಿ ಸಂಖ್ಯಾಬಲವನ್ನು ಜಾಸ್ತಿ ಮಾಡುತ್ತೇವೆ. ನಂಜುಂಡಪ್ಪನವರ ವರದಿಯ ಆಧಾರದ ಮೇಲೆ ನಾವು ಹಾಸ್ಟೆಲ್‌ಗಳನ್ನು ಕ್ಷೇತ್ರವಾರು ಹಂಚುತ್ತೇವೆಂದು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಎಸ್. ಕುಮಾರ್ ಬಂಗಾರಪ್ಪ** : ಜಿಲ್ಲಾಪಂಚಾಯಿತಿಗೆ ನೀವೇನು ಪ್ರಸ್ತಾವನೆಯನ್ನು ಕಳುಹಿಸುತ್ತೇವೆಂದು ಹೇಳುತ್ತೀರಿ, ಇದೇ ಸಮಸ್ಯೆ ಹೋದ ಮತ್ತು ಅದರ ಹಿಂದಿನ ವರ್ಷ ಬಂದಿತ್ತು. ಜಿಲ್ಲಾ ಪಂಚಾಯಿತಿಗೂ ಸ್ಟ್ಯಾಂಪ್ ಡ್ಯೂಟಿಗೆ ಅನುಮತಿ ಕೊಡಲಿಲ್ಲ ಅಲ್ಲಿ ಹುಡುಗರನ್ನು ಸೇರಿಸಿಕೊಂಡು ಕೆಲವರು ಒದ್ದಾಡತಕ್ಕ ಪರಿಸ್ಥಿತಿ ಕೂಡ ಬಂತು. ಯಾವುದೇ ರೀತಿಯ ಅನುಕೂಲಗಳನ್ನು ಮಾಡುವುದಕ್ಕಾಗಲಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳು ಇರಬೇಕಾದರೆ ಇದೇ ಜಿಲ್ಲಾಪಂಚಾಯಿತಿಗು ಸ್ಟ್ಯಾಂಪ್ ಡ್ಯೂಟಿಯ ಮೇಲೆ ಎಷ್ಟು ಸಲ ನಾವು ವಾದ ಮಾಡಿದ್ದೇವೆ. ಆರ್.ಡಿ.ಪಿ.ಆರ್. ನವರು ಇದು ಜಿಲ್ಲಾ ಪಂಚಾಯಿತಿಯ ಹಣ, ಸಮಾಜ ಕಲ್ಯಾಣ ಇಲಾಖೆಗೆ ನಾವೇಕೆ ಕೊಡಬೇಕು ಎಂಬ ವಾದದ ಮೇಲೆ ಅನುಮತಿಯನ್ನೇ ಕೊಡಲಿಲ್ಲ. ಇಲ್ಲಿರತಕ್ಕ ನಮ್ಮ ಕಾರ್ಯದರ್ಶಿಯವರಿಗೆ ನೂರಾರು ಸಲ ನಾನು ಫೋನ್ ಮಾಡಿದ್ದೇನೆ. ದಯವಾಡಿ ಹಾಸ್ಟೆಲ್‌ಗಳಲ್ಲೇನು ಹೆಚ್ಚು ಸಂಖ್ಯೆಯಲ್ಲಿ ಸೇರಿದ್ದಾರೆ ಅವರಿಗೆ ಅನುಕೂಲ ಮಾಡಿಕೊಡಿ ಎಂದು. ಈವತ್ತು ಹುಡುಗರು ಹಾಸ್ಟೆಲ್‌ನಲ್ಲಿರುವ ಹುಡುಗರ ಜೊತೆಯೇ ಅಡ್‌ಜೆಸ್ಟ್ ಮಾಡಿಕೊಳ್ಳತಕ್ಕ ವ್ಯವಸ್ಥೆ ಸಹ ಬಂದಿದೆ. ಮತ್ತೊಂದು ನಾನು ಮಾತನಾಡತಕ್ಕ ಸಂದರ್ಭದಲ್ಲಿ ಏನಂತಿ ಮಾಡಿಕೊಂಡಿದ್ದೆ . ಅಲ್ಪಸಂಖ್ಯಾತರದ್ದನ್ನೂ ಕೂಡ ನಾವು ಮಾಡಿಲ್ಲ. ಅಲ್ಪಸಂಖ್ಯಾತರ ಮನವಿಗಳು ಬಹಳಷ್ಟು ಕಡೆ ಹಾಸ್ಟೆಲ್‌ಗಳು ಇಲ್ಲ ಎಂದು ಬಂದಿದೆ.

ದಯವಿಟ್ಟು especially ನಮ್ಮ ಅಲ್ಪಸಂಖ್ಯಾತರ ಉರ್ದು ಹೈಸ್ಕೂಲ್‌ಗಳು ಎಲ್ಲೆಲ್ಲಿ ಇದ್ದಾವೋ, ಅಲ್ಲಿಗೆಲ್ಲಾ ಹಾಸ್ಟೆಲ್ ಸೌಲಭ್ಯ ಕೊಡಿ. ಅವರೆಲ್ಲರೂ ಈಗ ಹಾಸ್ಟೆಲ್‌ಗೆ ಹೋಗಬೇಕೆಂದರೆ 30–40 ಕಿ.ಮೀ. ಹೋಗಬೇಕಾಗಿದೆ. ಹಾಗಾಗಿ ದಯಮಾಡಿ ನೀವು ಎಲ್ಲೆಲ್ಲಿ ಉರ್ದು ಸ್ಕೂಲ್‌ಗಳನ್ನು ಕೊಟ್ಟಿದ್ದೀರೋ, ಅಲ್ಲಿಗೊಂದು ಹಾಸ್ಟೆಲ್ ಅನ್ನು ಕೊಡತಕ್ಕ ವ್ಯವಸ್ಥೆ ಮಾಡಬೇಕು. ಬೇರೆ ಕಡೆಯಿಂದ ಅಲ್ಲಿಗೆ ಬಂದು ಸೇರತಕ್ಕಂಥ ವ್ಯವಸ್ಥೆಯೂ ಸಹ ಇದರಿಂದ ಆಗುತ್ತದೆ. ಒಂದೊಂದು ಸ್ಕೂಲ್‌ಗೆ

30–30 ಕಿ.ಮೀ. ವ್ಯತ್ಯಾಸಗಳು ಅಲ್ಲಿ ಇವೆ. ಹಾಗಾಗಿ ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಸ್ಕೂಲ್‌ಗಳಿಗೆ ಹಾಸ್ಟೆಲ್‌ಗಳನ್ನು ಕೊಡಿ. ನೀವು ಮಾನ್ಯ ನಂಜುಂಡಪ್ಪನವರ ವರದಿಯ ಮೇಲೆಯೇ ನಾನು stick on ಆಗುತ್ತೇನೆ ಎಂದು ಹೇಳುತ್ತಿದ್ದೀರಿ. ಅದರಿಂದ ನಮಗೆ ಸಂತೋಷವೇ. ಆ ಪ್ರಕಾರವಾಗಿಯೇ ನೀವೇನಾದರೂ ಮಾಡುವುದಾದರೆ ಒಳ್ಳೆಯದು. ಇದಕ್ಕೆ ಬೇಕಾದಂತಹ ಹೆಚ್ಚಿನ ಹಣವನ್ನು ಜಿಲ್ಲಾ ಪಂಚಾಯಿತಿಗಳಿಂದ ಕೇಳುತ್ತಿದ್ದೇವೆಂದು ಏನು ನೀವು ಹೇಳುತ್ತಿದ್ದೀರಿ, ಅದು ಸರಿಯಿಲ್ಲ. ಜಿಲ್ಲಾ ಪಂಚಾಯಿತಿಗಳಿಂದ ಇದು ಆಗುವುದಿಲ್ಲ. ಏಕೆಂದರೆ, ಕಳೆದ ಎರಡು ವರ್ಷಗಳಿಂದ ನಾವು ಇದರ ಬಗ್ಗೆ ಒದ್ದಾಡಿದ್ದೇವೆ. ದಯಮಾಡಿ ಈಗ 75 ಇರುವುದನ್ನು 100ಕ್ಕೆ extension ಮಾಡುವುದಕ್ಕೆ ನಿಮ್ಮ ಇಲಾಖೆಯಿಂದಲೇ ಇದರ ಅನುದಾನವನ್ನು ನೇರವಾಗಿ ನಮ್ಮ ಹಾಸ್ಟೆಲ್‌ಗಳಿಗೆ ರಿಲೀಸ್ ಮಾಡತಕ್ಕಂಥ ವ್ಯವಸ್ಥೆ ಮಾಡಿ. ಹೋದ ಸಲ ಮಾನ್ಯ ಕೃಷ್ಣಪ್ಪನವರು ಸಚಿವರಾಗಿದ್ದಾಗಲೂ ಕೂಡ, ಇದೇ ತರಹದ ವಾದವನ್ನು ನಾವು ಮಾಡಿಕೊಂಡು ಬಂದಿದ್ದರೂ ಸಹ, ಎಷ್ಟೋ ಸಲ request ಮಾಡಿಕೊಂಡಿದ್ದರೂ ಸಹ, RDPR ರವರು ಅದಕ್ಕೆ ಒಪ್ಪಿರಲಿಲ್ಲ. ಹಾಗಾಗಿ ದಯಮಾಡಿ ಅದರ ಬಗ್ಗೆ ತಾವು ಉತ್ತರವನ್ನು ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಎ. ಕೃಷ್ಣಪ್ಪ (ವರ್ತೂರು)** : ಮಾನ್ಯ ಅಧ್ಯಕ್ಷರೆ, ಮಾಮೂಲಿಯಾಗಿ ಡಿಪಾರ್ಟ್‌ಮೆಂಟಿಗೆ ಏನೊಂದು ಅಲೋಕೇಷನ್ಸ್ ಬರುತ್ತದೋ, ಅದರ ಜೊತೆಗೆ pooled amount ನಿಂದ ನೀವು ಹಣ ತೆಗೆದುಕೊಳ್ಳವಂಥ ಪ್ರಯತ್ನ ಮಾಡಬೇಕು. 18% ಹಣ ಏನಿದೆಯೋ, ಅದರಿಂದ ದುಡ್ಡನ್ನು proper ಆಗಿ allocate ಮಾಡಲಿಕ್ಕೆ ತಾವು Finance Department ಗೆ ಹೇಳಿ. ನೀವ್ಯಾಕೆ ಹೋಗಿ ಜಿಲ್ಲಾ ಪಂಚಾಯಿತಿಗೆ RDPR ಗೆ ಮತ್ತು Finance Deparment ನವರಿಗೆ ಸಲಾಂ ಹೊಡೆಯಬೇಕು? ಒಟ್ಟಾರೆ 18% ದುಡ್ಡು ಎಷ್ಟಿದೆಯೋ, ಅದರಲ್ಲೇ ನಿಮಗೆ Demands Vs Supply ಗೆ ನೀವು ಕೇಳಿಕೊಳ್ಳಿ. ಏಕೆ ನೀವು ಜಿಲ್ಲಾ ಪಂಚಾಯಿತಿ ಮೇಲೆ, Finance Department ಮೇಲೆ ಹೇಳುತ್ತೀರಿ? Pooled amount ನಲ್ಲಿ ನಮ್ಮದು ಎಷ್ಟಿದೆಯೋ, ಅದರ share ಕೊಡಲಿಕ್ಕೆ ಹೇಳಿ. ಆ share ನಲ್ಲಿ Social Welfare Department ನಲ್ಲಿ Hostels ಮಾಡುತ್ತೇವೊ? infrastructure ಗೆ ಕೊಡುತ್ತೇವೊ? Extension buildings ಕಟ್ಟುತ್ತೇವೋ? ಅಥವಾ additional seats sanction ಮಾಡುತ್ತೇವೋ, That is the discretion left to the Department. Because, that money must go and shall go only to the welfare of the Scheduled Castes. ಅದರ ಬಗ್ಗೆ ನಿಮ್ಮ ಸರ್ಕಾರದ ನಿಲುವು ಏನಿದೆ ಎಂಬುದನ್ನು ದಯಮಾಡಿ ಈ ಮನೆಗೆ ಹೇಳಿ.

**ಶ್ರೀ ಬಾಲಚಂದ್ರ ಲ. ಜಾರಕಿಹೊಳಿ** : ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರು ಏನು ಸಲಹೆಗಳನ್ನು ಕೊಟ್ಟಿದ್ದಾರೋ, ಸರ್ಕಾರ ಅದನ್ನು ಗಂಭೀರವಾಗಿ ತೆಗೆದುಕೊಳ್ಳುತ್ತದೆ. ನಮ್ಮ ಹಿರಿಯ ಸದಸ್ಯರಾದ ಕೃಷ್ಣಪ್ಪ ಸಾಹೇಬರು ಒಳ್ಳೆಯ ಸಲಹೆಯನ್ನು ಈಗ ಕೊಟ್ಟಿದ್ದಾರೆ. 18%

pooled amount ಏನಿದೆಯೋ, ಅದರಿಂದ ಹಣವನ್ನು ತೆಗೆದುಕೊಂಡು ಮಾಡಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ನಾನು, ಇಲ್ಲೇ ಮಾನ್ಯ ಉಪ ಮುಖ್ಯಮಂತ್ರಿಗಳಿದ್ದಾರೆ, ಅವರ ಜೊತೆಗೆ ಚರ್ಚೆ ಮಾಡುತ್ತೇನೆ. ಇದು ಅನೇಕ ವರ್ಷಗಳಿಂದ ಬಂದಂತಹ ಸಮಸ್ಯೆಯಾಗಿದೆ. ಹಾಸ್ಟೆಲ್ ಸಮಸ್ಯೆ ಕೇವಲ ಇವತ್ತೇ ಪ್ರಾರಂಭವಾದದ್ದಲ್ಲ. ಇದನ್ನು ದಯವಮಾಡಿ ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕು. ಏಕೆಂದರೆ, ತಾವೆಲ್ಲರೂ ಬಹಳ ಅನುಭವಸ್ಥರಾಗಿದ್ದೀರಿ. ಇದು ಬಹಳ ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕಂಥ ಸಮಸ್ಯೆಯಾಗಿದೆ. ಇದು ಕೇವಲ ಒಂದೆರಡು ತಿಂಗಳಿನಲ್ಲಿ ಸರಿ ಹೋಗುವಂಥಾದ್ದಲ್ಲ. ಖಂಡಿತವಾಗಿಯೂ ನಾವು ಈ ಸರ್ಕಾರದಲ್ಲಿ ಅದರ ಬಗ್ಗೆ ಗಂಭೀರವಾಗಿ ಚರ್ಚೆ ಮಾಡಿ, 18% ದುಡ್ಡು pooled ಮಾಡಿರುವುದರಲ್ಲಿ ತೆಗೆದುಕೊಳ್ಳಬೇಕೋ ಅಥವಾ ಜಿಲ್ಲಾ ಪಂಚಾಯಿತಿಗಳಿಗೆ ಕಟ್ಟುನಿಟ್ಟಾಗಿ ಆದೇಶ ಕೊಡಬೇಕೋ ಎಂಬುದನ್ನು ನೋಡುತ್ತೇವೆ. ಏಕೆಂದರೆ, ಹಿಂದೆ ಆದಂತಹ ಸಮಸ್ಯೆ ಮುಂದೆ ಆಗಬಾರದು. ಇದನ್ನು ಖಂಡಿತವಾಗಿಯೂ ಗಮನದಲ್ಲಿಟ್ಟುಕೊಳ್ಳುತ್ತೇವೆ. SC/ST ಮಕ್ಕಳಿಗೆ ಅನ್ಯಾಯವಾಗಬಾರದು, ಹಿಂದುಳಿದ ವರ್ಗಗಳ ಜನಕ್ಕೆ ಅನ್ಯಾಯವಾಗಬಾರದು. ತಾವೇನು ಸಲಹೆಯನ್ನು ಕೊಟ್ಟಿದ್ದೀರೋ, ಆ ಸಲಹೆಯನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳುತ್ತದೆ. ಇನ್ನೊಂದು ವಾರದಲ್ಲಿ 110 ಹಾಸ್ಟೆಲ್‌ಗಳನ್ನು ನಾವು ಪಂಚಿಕೆ ಮಾಡುವವರಿದ್ದೇವೆ. ಅದನ್ನು ನಾವು ಮಾನ್ಯ ನಂಜುಂಡಪ್ಪನವರ ವರದಿ ಪ್ರಕಾರವೇ ಮಾಡುತ್ತೇವೆ. ಆದರೆ ಆ ಟೈಮ್‌ನಲ್ಲಿ ಕೆಲವೊಂದು ಕ್ಷೇತ್ರದಲ್ಲಿ, ನಂಜುಂಡಪ್ಪ ವರದಿಯಲ್ಲಿ ಇಲ್ಲದಿದ್ದರೂ, ಕೆಲವೊಂದು ಕಡೆ ಹಾಸ್ಟೆಲ್‌ಗಳ ಸಂಖ್ಯೆ ಬಹಳ ಕಡಿಮೆ ಇದೆ, ಅದನ್ನೂ ಗಮನದಲ್ಲಿಟ್ಟುಕೊಳ್ಳುತ್ತೇವೆ. ತಾವು ಕೊಟ್ಟಂತಹ ಸಲಹೆಯನ್ನು ಖಂಡಿತವಾಗಿಯೂ ಈ ಸರ್ಕಾರ ನಿರ್ವಹಿಸುತ್ತದೆ ಎಂದು ತಮಗೆ ನಾನು ಭರವಸೆ ಕೊಡುತ್ತೇನೆ.

**ಶ್ರೀ ಎ. ಕೃಷ್ಣಪ್ಪ** : ಮಾನ್ಯ ಅಧ್ಯಕ್ಷರೆ, ನಾವೇ ಎಲ್ಲಾ burden ಅನ್ನು ತಲೆ ಮೇಲೆ ಹಾಕಿಕೊಳ್ಳಬೇಕಾಗಿಲ್ಲ. SC/ST ಗೆ ಒಂದು proposal ಅನ್ನು ಇವರು Government of India ಗೆ ಕೊಟ್ಟಿದ್ದರೆ ಒಳ್ಳೆಯದಾಗುತ್ತಿತ್ತು. ಅಲ್ಲಿ ಈ SC/ST ಶಾಖೆಗೆ ಸಂಬಂಧಪಟ್ಟಂತೆ ದುಡ್ಡಿಗೆ ಯಾವತ್ತೂ ಸಮಸ್ಯೆ ಬಂದಿಲ್ಲ. ನಾವೂ ಕೂಡ extra grants ಅನ್ನು ತೆಗೆದುಕೊಂಡಿದ್ದೆವು. ನಮ್ಮ demands throughout the State ಎಷ್ಟಿದೆ ಎಂಬ ಬಗ್ಗೆ ಈಗ proposals ಭಾರತ ಸರ್ಕಾರಕ್ಕೆ ಹೋಗಿದೆಯೇ? 2001 population ಗೂ ಮತ್ತು ಇವತ್ತಿನ population ಗೂ ಎಷ್ಟು percentage ಜಾಸ್ತಿ increase ಆಗಿದೆ ಎಂಬ ಬಗ್ಗೆ records ಭಾರತ ಸರ್ಕಾರದ ಬಳಿಯೂ ಇದೆ, ನಮ್ಮ ಹತ್ತಿರವೂ ಇದೆ. ಆದ್ದರಿಂದ pending disposal or approval ಅಥವಾ clearance ಬರುವುದಕ್ಕೆ ಮೊದಲು ನಮ್ಮ ದುಡ್ಡಿನಿಂದ ಪ್ರಾರಂಭ ಮಾಡಿ, ಆಮೇಲೆ you can submit the claims before Government of India. ಅದನ್ನಾದರೂ ಮಾಡಿ. ಅದರ ಬಗ್ಗೆಯಾದರೂ ನಮಗೆ ಭರವಸೆ ಕೊಡಿ. ನಮ್ಮ Finance MInister ಇಲ್ಲೇ ಇದ್ದಾರೆ. ಅಲ್ಲಿಂದ ನಮಗೆ reimbursement ಬರುತ್ತದೆ. ಇಲ್ಲವೇ, pooled amuount ನಲ್ಲಿ ಹಲವಾರು

ಇಲಾಖೆಗಳಿಂದ ಏನು ದುಡ್ಡು ವೇಸ್ಟ್ ಆಗುತ್ತಿದೆಯೋ, ಅದನ್ನು re-call ಮಾಡಿ. ಇವೆರಡರಲ್ಲಿ ಯಾವುದಾದರೂ ಒಂದನ್ನು ಇಟ್ಟುಕೊಂಡು, ಅದನ್ನು ನೀವು ಕೊಡಲೇಬೇಕಾಗುತ್ತದೆ. ಯಾವುದೇ ಸರ್ಕಾರ ಇರಲಿ, ನಮ್ಮ ಕಾಲದಲ್ಲಿಯೂ ಸಹ ನಾವು additional seats ಅನ್ನು ಕೊಟ್ಟೆವು. ಕಾರಣವೇನೆಂದರೆ, The Government cannot postpone few things. ಒಂದು hunger ಅಂದರೆ ಹಸಿವು, ಇನ್ನೊಂದು ಶಿಕ್ಷಣ, ಇನ್ನೊಂದು ಆರೋಗ್ಯ. ಈ ಮೂರನ್ನು ಮುಂದಕ್ಕೆ ಹಾಕುತ್ತೇವೆ ಎಂದು ಹೇಳುವಂತಹ ಸರ್ಕಾರ ಯಾವುದಾದರೂ ಇದೆಯೇ ಅಥವಾ ಶ್ರೀವಾನ್ ಯಡಿಯೂರಪ್ಪನವರೇನಾದರೂ Hunger, Shelter, Education, Health I can postpone it, because there is dearth of money ಎಂದು ಹೇಳುತ್ತಾರೋ? ಆ ರೀತಿ ಹೇಳಲಿಕ್ಕೆ ಬರುವುದಿಲ್ಲ. ಹಸಿವನ್ನು ಮುಂದಕ್ಕೆ ಹಾಕಲಿಕ್ಕೆ ಬರುವುದಿಲ್ಲ, ಶಿಕ್ಷಣವನ್ನು ಮುಂದಕ್ಕೆ ಹಾಕಲಿಕ್ಕೆ ಬರುವುದಿಲ್ಲ, ಇವೆಲ್ಲವೂ ಮಾಡುವುದಿಲ್ಲ ಎಂದು ಹೇಳಿದರೆ, that cannot be taken as a responsible Government. ಅದಕ್ಕೋಸ್ಕರ, ನಿಮಗೆ options ಇವೆ. Pooled amount draw ಮಾಡುವುದಕ್ಕೆ ನೀವು ಆದೇಶ ಕೊಡಬಹುದು? ಇಲ್ಲವೇ, Finance Department ನಿಂದ permission ತೆಗೆದುಕೊಂಡು investment ಮಾಡಿ ನೀವೇ start ಮಾಡಿ. ನಂತರ Government of India ಗೆ ನೀವು reimbursement ಮಾಡಲು claim ಮಾಡಿ. There are ways and means to settle this grievance. ಇಲ್ಲೇ ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳು ಇರುವುದರಿಂದ, ಮಾನ್ಯ ಮಂತ್ರಿಗಳು ಇದಕ್ಕೊಂದು ಭರವಸೆಯನ್ನು ಈ ಮನೆಯಲ್ಲಿ ಕೊಡಬೇಕೆಂದು ನಾನೂ ಕೂಡ ಮಕ್ಕಳ ಪರವಾಗಿ ಪ್ರಾರ್ಥನೆ ಮಾಡುತ್ತೇನೆ.

**ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ** : ಮಾನ್ಯ ಅಧ್ಯಕ್ಷರೆ, ಈಗ ಪ್ರತಿ ತಿಂಗಳೂ ಹಾಸ್ಟೆಲ್‌ಗಳಿಗೆ ಅನುದಾನವನ್ನು ಕೊಡದೆ ಅಲ್ಲಿ ಸರಿಯಾದಂತಹ ಆಹಾರ ವಿತರಣೆ ಮತ್ತು quality maintain ಮಾಡತಕ್ಕಂಥ ಒಂದು ವ್ಯವಸ್ಥೆ ಇಡೀ ರಾಜ್ಯದಲ್ಲಿ ಆಗುತ್ತಿಲ್ಲ. ಆದಕಾರಣ ಅನುದಾನವನ್ನು ಪ್ರತಿ ತಿಂಗಳೂ ಬಿಡುಗಡೆ ಮಾಡಬೇಕು. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ರೀತಿಯಾಗಿದೆ ಎಂದಲ್ಲ, ಹೋದ ಸರ್ಕಾರದಲ್ಲಿ ಆರು ತಿಂಗಳೀನದ್ದು pending ಇತ್ತು. ಆದ್ದರಿಂದ ಅಲ್ಲಿರತಕ್ಕಂಥ superintendent ನಮಗೆ ದುಡ್ಡೇ ಬಂದಿಲ್ಲ ಎಂದು ಎಂದು ಜನರ ಮುಂದೆ ಈ ಸರ್ಕಾರದ ಬಗ್ಗೆ ಒಂದು ಅವಹೇಳನಕಾರವಾದಂತಹ ಮಾತುಗಳನ್ನು ಹೇಳುತ್ತಿರುವುದರಿಂದ, ನೌಕರರಿಗೆ ಯಾವ ರೀತಿಯಾಗಿ ನಾವು ಪ್ರತಿ ತಿಂಗಳೂ 28ಕ್ಕೆ ಸ್ಯಾಲರಿಯನ್ನು ಕೊಡುತ್ತೇವೋ, ಅದೇ ರೀತಿಯಲ್ಲಿ ಹಾಸ್ಟೆಲ್ ಮಕ್ಕಳಿಗೂ ಕೂಡ ಒಳ್ಳೆಯ ಗುಣಮಟ್ಟದ ಆಹಾರವನ್ನು ಕೊಡಬೇಕಾಗಿದ್ದರೆ, ಆ ಅನುದಾನವನ್ನು ಜಿಲ್ಲಾ ಪಂಚಾಯಿತಿಯಿಂದ ಪ್ರತಿ ತಿಂಗಳೂ ಕೂಡ ಬಿಡುಗಡೆ ಆಗತಕ್ಕಂಥ ಕೆಲಸವನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ.

**ಶ್ರೀ ಎಸ್. ಕುಮಾರ್ ಬಂಗಾರಪ್ಪ** : ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಜಿಲ್ಲಾ ಪಂಚಾಯಿತಿ ಮೇಲೆ depend ಆಗುವುದಕ್ಕೆ

ಹೋಗಬೇಡಿ. ಈಗ additional seats ಗೆ ನಾವು ಅವಕಾಶ ಮಾಡಿಕೊಳ್ಳುತ್ತಿದ್ದೇವೆ. Stamp duty ಯಲ್ಲಿ ನಮ್ಮ pendings ಹಾಗೆಯೇ ಉಳಿದುಕೊಂಡಿವೆ. Atleast, ನಮಗೆ stamp duty ಯನ್ನು ನಮಗೆ ನೀವು divert ಮಾಡಿಕೊಟ್ಟು, ಈ additional seats ಗೆ ಈಗೇನು ಒತ್ತಡ ಬರುತ್ತಿದೆ ಅದಕ್ಕೆ ಅವಕಾಶ ಮಾಡಿಕೊಡಬೇಕು. ಹಾಸ್ಟೆಲ್‌ನಲ್ಲಿ ಜಾಗ ಕೂಡ ಇದೆ, wardens ಕೂಡ ಅದಕ್ಕೆ agree ಮಾಡುತ್ತಾರೆ. ಅದಕ್ಕೆ ತಾತ್ಕಾಲಿಕವಾಗಿ ಅವಕಾಶ ಮಾಡಿಕೊಡಿ. Central funds ನಿಂದ reimbursement ಮಾಡಿಕೊಳ್ಳುವ ಬಗ್ಗೆ ನಾವು ಮಾತನಾಡಿದೆವು. ಅದಕ್ಕೆಲ್ಲಾ ನೀವು subsequent ಆಗಿ entire seats ಗೆ ಮಾಡಿಕೊಳ್ಳಿ. ಈಗ applications ಇವೆ. ಅಲ್ಲಿ ಜಾಗ ಕೂಡ ಇದೆ. ದಯಮಾಡಿ ತಾವು ಅದಕ್ಕೆ ಆದೇಶ ಮಾಡಿದರೆ ಅನುಕೂಲವಾಗುತ್ತದೆ. ಏಕೆಂದರೆ, ಸಮಾಜ ಕಲ್ಯಾಣ ಇಲಾಖೆ ಮಕ್ಕಳಿಗೆ ಅನುಕೂಲ ಮಾಡುವಂತಹ ಇಲಾಖೆಯಾಗಿದೆ.

**ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)** : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಮ್ಮ ಅಧಿಕಾರಿಗಳ ಜೊತೆಗೆ ಸಮಾಲೋಚನೆ ಮಾಡುತ್ತೇನೆ. ಇದಕ್ಕೆ ಹಣಕಾಸಿನ ಯಾವುದೇ ತೊಂದರೆ ಇಲ್ಲ. ಈ ಬಾರಿ SSLC ಯಲ್ಲಿ ಒಳ್ಳೆಯ results ಬಂದಿದೆ. ಹಾಸ್ಟೆಲ್‌ಗಳ ಸಂಖ್ಯೆಯನ್ನೂ ಕೂಡ ನಾವು ಹೆಚ್ಚಿಸುತ್ತಿದ್ದೇವೆ. ಅದಕ್ಕೆ ಅಗತ್ಯ ಇರುವಂತಹ ಎಲ್ಲಾ ವ್ಯವಸ್ಥೆಯನ್ನೂ ಮಾಡಲಿಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಅದಕ್ಕೆ ಸೂಕ್ತವಾದ ಕ್ರಮ ತೆಗೆದುಕೊಂಡು ತತ್‌ಕ್ಷಣವೇ ನಾವು ಮಾಡುತ್ತೇವೆ.

## ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಸರ್ಕಾರಿ ಐ.ಐ.ಟಿ. ಗಳಲ್ಲಿರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು

169 (910) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳ್ತಂಗಡಿ ತಾಲ್ಲೂಕು ಮಾಲಾಡಿ ಎಂಬಲ್ಲಿರುವ ಐ.ಟಿ.ಐ. ಸಂಸ್ಥೆಯಲ್ಲಿ ಖಾಲಿ ಇರುವ ವಿವಿಧ ವರ್ಗಗಳ ಹುದ್ದೆಗಳು ಎಷ್ಟು? ಮತ್ತು ಅವುಗಳನ್ನು ಯಾವಾಗ ತುಂಬಲಾಗುವುದು.

ಆ) ಈ ತರಬೇತಿ ಸಂಸ್ಥೆಯಲ್ಲಿ ಬಹುಭಾಗದ ಹುದ್ದೆಗಳು ಖಾಲಿ ಇದ್ದು ವಿದ್ಯಾರ್ಥಿಗಳಿಗೆ ಪಾಠ ಪ್ರವಚನಗಳನ್ನು ನಡೆಸಲು ಸಾಧ್ಯವೇ ಇಲ್ಲದ ಪರಿಸ್ಥಿತಿಯನ್ನು ಸರ್ಕಾರ ಗಮನಿಸಿದೆಯೇ? ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ದೀರ್ಘ ಕಾಲದಿಂದ ಗೌರವ ಶಿಕ್ಷಕರಾಗಿರುವವರನ್ನು ಖಾಯಂಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು? .

ಈ) ಈ ಸಂಸ್ಥೆಯ ಕಟ್ಟಡ ನಿರ್ಮಾಣದ ಕುರಿತಾದ ಪ್ರಗತಿಯ ವಿವರಗಳೇನು?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಬೆಳ್ತಂಗಡಿ ತಾಲ್ಲೂಕು ಮಾಲಾಡಿಯಲ್ಲಿರುವ ಸರ್ಕಾರಿ ಕೈ.ತ.ಸಂಸ್ಥೆಗೆ ಒಟ್ಟು 17 ಹುದ್ದೆಗಳನ್ನು ಸೃಜಿಸಲಾಗಿದೆ. ಅವುಗಳ ವಿವರಗಳು ಈ ಕೆಳಗಿನಂತಿವೆ.